**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಿ.ಎಂ.ಫಾರೂಖ್, ಶ್ರೀ ಎಸ್.ಎಲ್. ಭೋಜೇಗೌಡ ಮತ್ತು ಇತರ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳು ನಿಯಮ-330ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಹೇಳಿಕೆ.**

**ವಿಷಯ: ರಾಜ್ಯದಲ್ಲಿ ತೆಂಗು ಬೆಳೆಯುವ ಒಟ್ಟು ವಿಸ್ತೀರ್ಣ 5,91,000 ಹೆಕ್ಟೇರ್‌ಗಳಷ್ಟು ಮತ್ತು ತೆಂಗು ಬೆಳೆಯನ್ನು ಸಣ್ಣ ಮತ್ತು ಅತಿ ಸಣ್ಣ ಹಾಗೂ ಮಧ್ಯಮ ವರ್ಗದ ರೈತರು ಬೆಳೆಯನ್ನು ಬೆಳೆಯುತ್ತಿದ್ದು, ಪ್ರಸ್ತುತ ವರ್ಷದ ಕೊಬ್ಬರಿ ಉತ್ಪಾದನೆ 2.50 ಲಕ್ಷ ಮೆಟ್ರಿಕ್ ಟನ್ ಎಂದು ಅಂದಾಜಿಸಲಾಗಿದೆ. ರಾಜ್ಯದಲ್ಲಿ ಕೊಬ್ಬರಿಯನ್ನು ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಾಲ್‌ಗೆ 13,000/- ರೂ ನಂತೆ ಕೇಂದ್ರ ಸರ್ಕಾರದ ನಾಫೆಡ್ ಮತ್ತು ರಾಜ್ಯದ ಕರ್ನಾಟಕ ಕೋ ಅಪರೇಟಿವ್ ಮಾರ್ಕೆಟಿಂಗ್ ಫೆಡರೇಷನ್ ಮುಖೇನ ಖರೀದಿಸಲಾಗುತ್ತಿದೆ. ರಾಜ್ಯದಲ್ಲಿ ಈ ಯೋಜನೆಯಡಿ 62,500 ಮೆಟ್ರಿಕ್ ಟನ್‌ನಷ್ಟು ಕೊಬ್ಬರಿ ಖರೀದಿಸಲು ಗುರಿ ನಿಗದಿಪಡಿಸಿದ್ದು, ಇದು ಒಟ್ಟು ಉತ್ಪಾದನೆಯ 1/4 ರಷ್ಟು ಇದೆ. ದಿನಾಂಕ:05.02.2024 ರಂದು ಕೊಬ್ಬರಿ ಖರೀದಿ ನೊಂದಣಿ ಪ್ರಾರಂಭವಾದ ನಂತರ ನಾಲ್ಕು ದಿನಗಳಲ್ಲಿ 46,036 ರೈತರು 66,52,307 ಕ್ವಿಂಟಾಲ್ ಕೊಬ್ಬರಿ ಖರೀದಿಗೆ ನೊಂದಾಯಿಸಿದ್ದಾರೆ. ಆದರೆ, ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತರು ಈ ಯೋಜನೆಯಿಂದ ವಂಚಿತರಾಗಿದ್ದು ಆಕ್ರೋಶಗೊಂಡಿದ್ದಾರೆ, ಆದ್ದರಿಂದ ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತು ಕೇಂದ್ರದ ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಖರೀದಿಗೆ ನೊಂದಣಿ ಅವಕಾಶವನ್ನು ವಿಸ್ತರಿಸುವಂತೆ ಮತ್ತು ರಾಜ್ಯದ ಕೊಬ್ಬರಿ ಬೆಳೆಗಾರರಿಂದ ಹೆಚ್ಚುವರಿಯಾಗಿ ಒಂದು ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಖರೀದಿಸಲು ಕೇಂದ್ರಕ್ಕೆ ಒತ್ತಡ ತರಲು ಮತ್ತು ಬೆಂಬಲ ಬೆಲೆ ಯೋಜನೆಯಡಿ ಕೊಬ್ಬರಿ ಖರೀದಿ ಮುಂದುವರೆಸಲು ಒತ್ತಾಯಿಸುತ್ತೇವೆ..**

******

**ಹೇಳಿಕೆ:**

2024ನೇ ಸಾಲಿಗೆ ತೋಟಗಾರಿಕೆ ಇಲಾಖೆಯ ಅಂಕಿ-ಅಂಶಗಳ ಪ್ರಕಾರ ರಾಜ್ಯದಲ್ಲಿ ತೆಂಗು ಬೆಳೆಯನ್ನು 6.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತುಮಕೂರು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ರಾಮನಗರ, ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದ್ದು, ಅಂದಾಜು 60,840 ಲಕ್ಷ ತೆಂಗಿನಕಾಯಿ ಉತ್ಪಾದನೆಯನ್ನು ನಿರೀಕ್ಷಿಸಲಾಗಿರುತ್ತದೆ. ವಾರ್ಷಿಕ ಒಟ್ಟು ತೆಂಗು ಉತ್ಪಾದನೆಯಲ್ಲಿ ಶೇ.30 ರಷ್ಟು ಪ್ರಮಾಣವನ್ನು ಉಂಡೆ ಕೊಬ್ಬರಿಗೆ ಪರಿಗಣಿಸಲಾಗುತ್ತಿದ್ದು, ಅಂದಾಜು 2.60 ಲಕ್ಷ ಮೆಟ್ರಿಕ್ ಟನ್ ಉಂಡೆ ಕೊಬ್ಬರಿ ಉತ್ಪಾದನೆ ಇರುತ್ತದೆ.

....2

ಕೇಂದ್ರ ಸರ್ಕಾರವು ಎಫ್.ಎ.ಕ್ಯೂ ಗುಣಮಟ್ಟದ ಉಂಡೆ ಕೊಬ್ಬರಿ ಪ್ರತಿ ಕ್ವಿಂಟಾಲ್‌ಗೆ ರೂ.12,000/- ಬೆಂಬಲ ಬೆಲೆಯನ್ನು ಘೋಷಿಸಿದ್ದು, ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ಉಂಡೆ ಕೊಬ್ಬರಿ ಧಾರಣೆಯು ಬೆಂಬಲ ಬೆಲೆಗಿಂತ ಕಡಿಮೆ ಧಾರಣೆಯಲ್ಲಿ ಮಾರಾಟವಾದ ಹಿನ್ನೆಲೆಯಲ್ಲಿ ಜಿಲ್ಲಾ ಟಾಸ್ಕ್ ಫೋರ್ಸ್ ಶಿಫಾರಸ್ಸಿನ ಮೇರೆಗೆ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕೊಬ್ಬರಿ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ಕೇಂದ್ರ ಸರ್ಕಾರವು 62,500 ಮೆಟ್ರಿಕ್ ಟನ್ ಉಂಡೆ ಕೊಬ್ಬರಿಯನ್ನು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಿಂದ 90 ದಿವಸಗಳ ಕಾಲಾವಧಿಯಲ್ಲಿ (ದಿ:01.02.2024 ರಿಂದ ದಿ:30.04.2024 ರವರೆಗೆ) ಖರೀದಿಗೆ ಅನುಮತಿ ನೀಡಲಾಗಿರುತ್ತದೆ.

ಕಳೆದ ವರ್ಷ ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಗರಿಷ್ಠ 54,750 ಮೆಟ್ರಿಕ್ ಟನ್ ಉಂಡೆ ಕೊಬ್ಬರಿ ಖರೀದಿ ಪ್ರಮಾಣವನ್ನು ನಿಗದಿಪಡಿಸಿ, ದಿನಾಂಕ:27.01.2023 ರಿಂದ ದಿನಾಂಕ:27.07.2023 ರವರೆಗೆ ಖರೀದಿ ಕಾಲಾವಧಿಯನ್ನು ನಿಗದಿಪಡಿಸಲಾಗಿತ್ತು. ತದನಂತರ ರಾಜ್ಯ ಸರ್ಕಾರದ ಕೋರಿಕೆಯ ಮೇರೆಗೆ ದಿನಾಂಕ:26.08.2023ರವರೆಗೆ ವಿಸ್ತರಿಸಿ ಒಟ್ಟಾರೆಯಾಗಿ 07 ತಿಂಗಳ ಖರೀದಿ ಕಾಲಾವಧಿಯನ್ನು ನೀಡಲಾಗಿತ್ತು.

ಇದರನ್ವಯ ಕೊಬ್ಬರಿ ಬೆಳೆಯುವ ತುಮಕೂರು, ಹಾಸನ, ಚಿಕ್ಕಮಗಳೂರು ಮೈಸೂರು, ಚಿತ್ರದುರ್ಗ, ಮಂಡ್ಯ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ 37,867 ನೋಂದಾಯಿತ ರೈತರ ಪೈಕಿ 35,236 ರೈತರಿಂದ 50,184 ಮೆಟ್ರಿಕ್ ಟನ್ ಉಂಡೆ ಕೊಬ್ಬರಿಯನ್ನು ಖರೀದಿಸಲಾಗಿರುತ್ತದೆ (ವಿವರವನ್ನು **ಅನುಬಂಧ-01** ರಲ್ಲಿ ಒದಗಿಸಿದೆ).

ಸರ್ಕಾರದ ಆದೇಶ ಸಂಖ್ಯೆ: ಸಿಒ 02 ಎಂಆರ್‌ಇ 2024, ದಿನಾಂಕ: 09.01.2024ರಲ್ಲಿ, 2024ನೇ ಸಾಲಿನ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್.ಎ.ಕ್ಯೂ. ಗುಣಮಟ್ಟದ ಉಂಡೆ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.12,000/-ರಂತೆ (ಗರಿಷ್ಠ ರೂ.62,500/- ಮೆಟ್ರಿಕ್ ಟನ್ ಉಂಡೆ ಕೊಬ್ಬರಿಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ) ಇದರ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಕ್ವಿಂಟಾಲ್ ಕೊಬ್ಬರಿಗೆ ರೂ.1,500/-ಗಳ ಪ್ರೋತ್ಸಾಹಧನ ಸೇರಿ ಒಟ್ಟಾರೆಯಾಗಿ ರೂ.13,500/- ರಂತೆ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಾದ ತುಮಕೂರು, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ರಾಮನಗರ, ಮಂಡ್ಯ, ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರತಿ ಎಕರೆಗೆ 06 ಕ್ವಿಂಟಾಲ್ ಗರಿಷ್ಠ ಪ್ರಮಾಣ ಹಾಗೂ ಪ್ರತಿ ರೈತರಿಂದ ಗರಿಷ್ಠ 20 ಕ್ವಿಂಟಾಲ್‌ರಂತೆ ಉಂಡೆ ಕೊಬ್ಬರಿಯನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಯಾದ ನಾಫೆಡ್ ಹಾಗೂ ರಾಜ್ಯ ಸರ್ಕಾರದ ವತಿಯಿಂದ ಕರ್ನಾಟಕ

....3

ರಾಜ್ಯ ಸಹಕಾರ ಮಾರಾಟ ಮಹಾಮಂಡಳವನ್ನು ಖರೀದಿ ಸಂಸ್ಥೆಯನ್ನಾಗಿ ನೇಮಿಸಿ ದಿನಾಂಕ:09.01.2024 ರಿಂದ ಖರೀದಿ ಪ್ರಕ್ರಿಯೆಗೆ ನಿಯಮಾನುಸಾರ ಅವಶ್ಯವಿರುವ ಪ್ರಕ್ರಿಯೆಗಳನ್ನು ಜಿಲ್ಲಾಡಳಿತ ಹಾಗೂ ಖರೀದಿ ಸಂಸ್ಥೆ ಪೂರ್ವಸಿದ್ಧತೆ ಕೈಗೊಂಡು ದಿನಾಂಕ:20.01.2024 ರಿಂದ ಅನ್ವಯವಾಗುವಂತೆ 45 ದಿವಸಗಳವರೆಗೆ ರೈತರ ನೋಂದಣಿ ಹಾಗೂ ಖರೀದಿ ಅವಧಿಯನ್ನು 03 ತಿಂಗಳವರೆಗೆ ನಿಗದಿಪಡಿಸಿ, ನೋಂದಣಿ ಕಾರ್ಯದ ಜೊತೆಗೆ ಖರೀದಿ ಪ್ರಕ್ರಿಯೆಯನ್ನೂ ಸಹ ಕೈಗೊಳ್ಳಲು ಆದೇಶಿಸಲಾಗಿತ್ತು.

ಈ ಮಧ್ಯೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಇವರು ಕೊಬ್ಬರಿ ಖರೀದಿ ಕೇಂದ್ರಗಳಲ್ಲಿ ಮಾರಾಟಕ್ಕೆ ತರುವ ರೈತರಿಗೆ ಬಯೋಮೆಟ್ರಿಕ್ ಕಡ್ಡಾಯವಾಗಿ ಅಳವಡಿಸುವಂತೆ ಮನವಿ ಮಾಡಿಕೊಂಡ ಹಿನ್ನೆಲೆಯಲ್ಲಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆ ಇವರ ನಿರ್ದೇಶನ ಮೇರೆಗೆ ದಿನಾಂಕ:12.01.2024 ರಂದು ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಖರೀದಿ ಸಂಸ್ಥೆಯಾದ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಹಾಗೂ ಸಂಬಂಧಪಟ್ಟ ಜಿಲ್ಲೆಗಳ ಅಧಿಕಾರಿ ಹಾಗೂ ರೈತ ಪ್ರತಿನಿಧಿಗಳೊಂದಿಗೆ ಸಭೆ ಜರುಗಿಸಿ, ಈ ಕೆಳಕಂಡಂತೆ ಕ್ರಮವಹಿಸಲಾಗಿದೆ. (ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ.)

- ರೈತರ ನೋಂದಣಿಗೆ ಬಯೋಮೆಟ್ರಿಕ್ ಅಳವಡಿಸಲು ದಿನಾಂಕ:20.01.2024 ರಂದು ಸರ್ಕಾರವು ಆದೇಶ ಹೊರಡಿಸಿ ರೈತರ ನೋಂದಣಿ ಕಾರ್ಯವನ್ನು ದಿನಾಂಕ:01.02.2024 ರಿಂದ ದಿನಾಂಕ:15.03.2024 ರವರೆಗೆ ನಿಗದಿಪಡಿಸಲಾಗಿತ್ತು.
- ಖರೀದಿ ಕೇಂದ್ರಗಳ ಸ್ವಚ್ಛತೆ, ಶೌಚಾಲಯ, ಕುಡಿಯುವ ನೀರು, ತೂಕದ ಯಂತ್ರ ಹಾಗೂ ಇತರೇ ಮೂಲಭೂತ ಸೌಕರ್ಯಗಳನ್ನು ಮಾಡಿಕೊಳ್ಳಲು ನಿರ್ದೇಶನ ನೀಡಲಾಗಿರುತ್ತದೆ.
- 2023-24ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಉಂಡೆ ಕೊಬ್ಬರಿ ಖರೀದಿಯ ಪ್ರಕ್ರಿಯೆಗೆ ಅನುಕೂಲವಾಗುವಂತೆ ಸಮಿತಿಗಳಲ್ಲಿ ಲಭ್ಯವಿರುವ ವೇಬ್ರಿಜ್‌ಗಳನ್ನು ಉಪಯೋಗಿಸಿಕೊಳ್ಳಲು ಹಾಗೂ ವೇಬ್ರಿಜ್‌ಗಳನ್ನು ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಸತ್ಯಾಪನೆ ಮತ್ತು ಮುದ್ರೆ ಹಾಗೂ ತಪಾಸಣೆ ಕೈಗೊಳ್ಳಲು ತುರ್ತಾಗಿ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ.
- ಖರೀದಿ ಕೇಂದ್ರಗಳಲ್ಲಿ ರೈತರ ಹೆಸರಿನಲ್ಲಿ ವರ್ತಕರು ತರುವ ಉತ್ಪನ್ನಗಳನ್ನು ಖರೀದಿಸದಂತೆ ಹಾಗೂ ಯಾವುದೇ ರೀತಿಯ ದುರುಪಯೋಗವಾಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವಂತೆ ಹಾಗೂ ಮಧ್ಯವರ್ತಿಗಳ

...4

ದುರುಪಯೋಗ ಕಂಡುಬಂದರೆ ಸಂಬಂಧಪಟ್ಟ ಜಿಲ್ಲಾ ಸಹಾಯಕ/ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಖರೀದಿ ಅಧಿಕಾರಿಗಳು ಕಾನೂನು ರೀತ್ಯಾ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.

- ಸಂಬಂಧಪಟ್ಟ ಎ.ಪಿ.ಎಂ.ಸಿ ಗಳಲ್ಲಿ ಈಗಾಗಲೇ ಆವಕವಾಗಿರುವ ಕೊಬ್ಬರಿಯನ್ನು ಮಾರಾಟ ಮಾಡದೆ ಸಂಗ್ರಹಿಸಿಟ್ಟುಕೊಂಡಿರುವ ಎಲ್ಲಾ ವರ್ತಕರ ದಾಸ್ತಾನು ಪರಿಶೀಲಿಸಿ ದೃಢೀಕರಿಸಿಕೊಂಡು ವರದಿ ಸಲ್ಲಿಸಲು ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಇವರು ನಿರ್ದೇಶನ ನೀಡಿರುತ್ತಾರೆ.

ಸರ್ಕಾರದ ಆದೇಶದಂತೆ ದಿನಾಂಕ:01.02.2024 ರಿಂದ ನೋಂದಣಿ ಪ್ರಕ್ರಿಯೆ ಕಾರ್ಯ ಪ್ರಾರಂಭಿಸುವ ಬದಲಾಗಿ ತಾಂತ್ರಿಕ ತೊಂದರೆಗಳಿಂದ, ದಿನಾಂಕ:05.02.2024 ರಿಂದ ಖರೀದಿ ನೋಂದಣಿ ಪ್ರಕ್ರಿಯೆಯನ್ನು ಆನ್‌ಲೈನ್ ಬಯೋಮೆಟ್ರಿಕ್ ಮೂಲಕ ಪ್ರಾರಂಭಿಸಲಾಗಿರುತ್ತದೆ.

ದಿನಾಂಕ:05.02.2024 ರಿಂದ 09.02.2024ರ ರವರೆಗಿನ ಅವಧಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಇವರ ವತಿಯಿಂದ 58 ಖರೀದಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ (ವಿವರವನ್ನು **ಅನುಬಂಧ-3**ರಲ್ಲಿ ಒದಗಿಸಿದೆ). ಸದರಿ ಖರೀದಿ ಕೇಂದ್ರಗಳಲ್ಲಿ ನೋಂದಣಿಗೊಂಡಿರುವ ಜಿಲ್ಲಾವಾರು ರೈತರ ವಿವರ ಈ ಕೆಳಕಂಡಂತಿದೆ :-

| ಕ್ರಸಂ. | ಜಿಲ್ಲೆಯ ಹೆಸರು | ನೊಂದಣಿಯಾದ ರೈತರ ಸಂಖ್ಯೆ | ಖರೀದಿಸಬಹುದಾದ ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) |
|---|---|---|---|
| 01 | ಚಾಮರಾಜನಗರ | 18 | 129 |
| 02 | ಚಿಕ್ಕಮಗಳೂರು | 42,23 | 60,855 |
| 03 | ಚಿತ್ರದುರ್ಗ | 3,471 | 50,987 |
| 04 | ಹಾಸನ | 15,728 | 2,08,416 |
| 05 | ಮಂಡ್ಯ | 6,879 | 87,654 |
| 06 | ಮೈಸೂರು | 399 | 5,012 |
| 07 | ರಾಮಗನರ | 129 | 1,593 |
| 08 | ತುಮಕೂರು | 15,199 | 2,10,659 |
| **ಒಟ್ಟು** | | **46,046** | **6,25,307** |

ರೈತರ ನೋಂದಣಿ ಸಂದರ್ಭದಲ್ಲಿ ಖರೀದಿ ಅಧಿಕಾರಿಗಳು ಮಧ್ಯವರ್ತಿಗಳೊಂದಿಗೆ ಸೇರಿಕೊಂಡು ಹಾಸನ ಜಿಲ್ಲೆಯ ಅರಸೀಕೆರೆ, ಚನ್ನರಾಯಪಟ್ಟಣ, ಶ್ರವಣಬೆಳಗೊಳ, ಗಂಡಸಿ ಮತ್ತು ಜಾವಗಲ್, ಮಂಡ್ಯ ಜಿಲ್ಲೆಯ ಕಿಕ್ಕೇರಿ, ಪಾಂಡವಪುರ, ಕೆ.ಆರ್.ಪೇಟೆ ಮತ್ತು

.....5

ಚಿಕ್ಕಮಗಳೂರು ಜಿಲ್ಲೆಯ ಕಡೂರು ಖರೀದಿ ಕೇಂದ್ರಗಳಲ್ಲಿ ಅನಧಿಕೃತ ಲ್ಯಾಪ್‌ಟಾಪ್ ಹಾಗೂ ಬಯೋಮೆಟ್ರಿಕ್ ಉಪಕರಣಗಳನ್ನು ಬಳಕೆ ಮಾಡಿ, ಹೆಚ್ಚುವರಿ ನೋಂದಣಿ ಮಾಡಿರುವುದು ತಂತ್ರಾಂಶದಲ್ಲಿ ಕಂಡು ಬಂದ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ 09 ಸಿಬ್ಬಂದಿಗಳನ್ನು ಅಮಾನತ್ತು ಮಾಡಿ, ಕಾನೂನು ರೀತ್ಯ ಕ್ರಮ ಜರುಗಿಸಲಾಗಿರುತ್ತದೆ. (ಸಿಬ್ಬಂದಿ ವಿವರ **ಅನುಬಂಧ-4ರಲ್ಲಿ** ಒದಗಿಸಿದೆ).

ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಕೊಬ್ಬರಿ ಉತ್ಪಾದನೆಯ ಶೇ.25 ರಷ್ಟು ಪ್ರಮಾಣ ಅಂದರೆ, ಗರಿಷ್ಠ 62,500 ಮೆಟ್ರಿಕ್ ಟನ್ ಉಂಡೆ ಕೊಬ್ಬರಿಯನ್ನು ಮಾತ್ರ ಖರೀದಿಸಲು ಅನುಮೋದನೆ ನೀಡಿರುತ್ತದೆ. ಇದರನ್ವಯ ದಿನಾಂಕ:09.02.2024ರ ಅಂತ್ಯಕ್ಕೆ ನೋಂದಣಿಯಾಗಿರುವ 46,046 ರೈತರಿಂದ ಮಾತ್ರ ಖರೀದಿಸಬಹುದಾಗಿದೆ.

ಕೇಂದ್ರ ಸರ್ಕಾರವು ಉಂಡೆ ಕೊಬ್ಬರಿ ಖರೀದಿಸಲು 90 ದಿವಸಗಳ ಕಾಲಾವಕಾಶ ನೀಡಲಾಗಿದ್ದು, ದಿನಾಂಕ:09.02.2024ಕ್ಕೆ ಕೇಂದ್ರ ಸರ್ಕಾರವು ನೀಡಿರುವ ಗರಿಷ್ಠ ಖರೀದಿ ಪ್ರಮಾಣಕ್ಕೆ ಅನುಗುಣವಾಗಿ ರೈತರು ನೋಂದಾಯಿಸಿಕೊಂಡಿರುವುದರಿಂದ ತಂತ್ರಾಂಶದಲ್ಲಿ ರೈತರ ನೋಂದಣಿ ಸ್ಥಗಿತಗೊಂಡಿರುತ್ತದೆ.

**ಈ ಸಂಬಂಧ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಉಂಡೆ ಕೊಬ್ಬರಿ ಖರೀದಿ ಪ್ರಕ್ರಿಯೆ ಕುರಿತು ಕೈಗೊಂಡ ಕ್ರಮಗಳ ಪ್ರಮುಖ ಅಂಶಗಳು:-**

1. 2017-18ನೇ ಸಾಲಿನಲ್ಲಿ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಯ ಧಾರಣೆಯು ರೂ.16,500/- ರಿಂದ ರೂ.17,000/-ರ ದರದಲ್ಲಿ ಮಾರಾಟವಾಗುತ್ತಿದ್ದ ಕೊಬ್ಬರಿಯು ಪ್ರತಿ ವರ್ಷ ಗಣನೀಯವಾಗಿ ಕಡಿಮೆಯಾಗುತ್ತಾ, ಪ್ರಸ್ತುತ 2024ನೇ ಸಾಲಿಗೆ ರೂ.7,500/- ರಿಂದ ರೂ.9,200/-ಗಳ ಧಾರಣೆಯಲ್ಲಿ ಮಾರಾಟವಾಗುತ್ತಿದೆ. ಈ ಸಂಬಂಧ ಕೊಬ್ಬರಿ ಧಾರಣೆಯಲ್ಲಿ ಗಣನೀಯವಾಗಿ ಕುಸಿತಗೊಂಡಿರುವ ಕುರಿತು ಪ್ರಗತಿಪರ ರೈತರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ ಪ್ರತಿಷ್ಠಿತ ಸಂಸ್ಥೆಗಳಾದ IIM/ISEC ಗಳ ಮುಖಾಂತರ ಒಂದು ಅಧ್ಯಯನ ವರದಿಯನ್ನು ಪಡೆಯಲು ಕ್ರಮವಹಿಸಲಾಗುತ್ತಿದೆ.
2. ನೋಂದಣಿ ಸಂದರ್ಭದಲ್ಲಿ ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿರುವ ರೈತರನ್ನು ಹೊರತುಪಡಿಸಿ ಬೇರೆ ಜಿಲ್ಲೆಯ ಸುಮಾರು 2,610 ರೈತರು ನೋಂದಣಿಯಾಗಿರುವುದು ಕಂಡು ಬಂದಿರುತ್ತದೆ. ಆದುದರಿಂದ, ಎನ್.ಐ.ಸಿ ತಂತ್ರಾಂಶದಲ್ಲಿ ಆಯಾ ಜಿಲ್ಲೆಯ ವ್ಯಾಪ್ತಿಗೆ ಬರುವ ರೈತರಿಂದ ಮಾತ್ರ ಖರೀದಿಸಲು ಅವಕಾಶ ಕಲ್ಪಿಸಲು ಸೀಮಿತಗೊಳಿಸುವುದು.
3. 2024ನೇ ಸಾಲಿಗೆ ರಾಜ್ಯದಲ್ಲಿ ಉತ್ಪಾದನೆಯಾಗುವ ಕೊಬ್ಬರಿಯ (ಮಿಲ್ಲಿಂಗ್) ಮಾಹಿತಿಯನ್ನು ತೋಟಗಾರಿಕೆ ಇಲಾಖೆಯಿಂದ ಪಡೆದು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗಿದೆ.

...6

4. ತೆಂಗು ಬೆಳೆಯು ವಾರ್ಷಿಕ ಬೆಳೆಯಾಗಿದ್ದು, ವರ್ಷವಿಡೀ ಕಟಾವು ಮಾಡುವುದರಿಂದ ಖರೀದಿ ಪ್ರಕ್ರಿಯೆಯನ್ನು ವರ್ಷವಿಡೀ ಕೈಗೊಳ್ಳುವುದು ಸೂಕ್ತವೆಂದು ಕೇಂದ್ರ ಸರ್ಕಾರಕ್ಕೆ ಕೋರಲಾಗುತ್ತದೆ.
5. ಜಿಲ್ಲಾವಾರು ಉಂಡೆ ಕೊಬ್ಬರಿ ಉತ್ಪಾದನೆ ಹಾಗೂ ರೈತರ ನೋಂದಣಿ ಅನುಪಾತ ಆಧಾರದ ಮೇಲೆ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಪ್ರಮಾಣವನ್ನು ಜಿಲ್ಲಾವಾರು ಹಂಚಿಕೆ ಮಾಡಿ, ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳಬಹುದು.
6. ಖರೀದಿ ಪ್ರಕ್ರಿಯೆಯಲ್ಲಿ ರೈತರ ನೋಂದಣಿ ಹಾಗೂ ಖರೀದಿ ಎರಡೂ ಸಂದರ್ಭದಲ್ಲೂ ಬಯೋಮೆಟ್ರಿಕ್ ಅಳವಡಿಸಿ ಓ.ಟಿ.ಪಿ. ಜನರೇಟ್ ಮಾಡಲು ಅವಕಾಶ ಕಲ್ಪಿಸಿದ್ದಲ್ಲಿ ಮಧ್ಯವರ್ತಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆಯುವುದನ್ನು ತಪ್ಪಿಸಲು ಕ್ರಮವಹಿಸಲಾಗುತ್ತದೆ.
7. 2023ನೇ ಸಾಲಿನಲ್ಲಿ ಗಣನೀಯವಾಗಿ ಕೊಬ್ಬರಿ ಬೆಲೆಯು ಇಳಿಕೆಯಾಗಿರುವುದರಿಂದ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯಿಂದ ವೈಜ್ಞಾನಿಕ ಅಧ್ಯಯನ ವರದಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.
8. ಕೇಂದ್ರ ಸರ್ಕಾರದ ಬೆಂಬಲ ಬೆಲೆಯ ಮಾರ್ಗಸೂಚಿಗಳನ್ವಯ ರಾಜ್ಯದ ತೆಂಗು ಉತ್ಪಾದನೆಯ ಶೇ.25 ರಷ್ಟು ಪ್ರಮಾಣವನ್ನು ಮಾತ್ರ ಖರೀದಿಸಲು ಅವಕಾಶವಿರುತ್ತದೆ. ಸದರಿ ಪ್ರಮಾಣವನ್ನು ಹೆಚ್ಚಿಸಿ ಖರೀದಿಸಲು ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹಾರ ಮಾಡಲಾಗುತ್ತಿದೆ.

ಈ ಸಂಬಂಧ ದಿನಾಂಕ:09.02.2024ರ ಅಂತ್ಯಕ್ಕೆ ನೋಂದಣಿಯಾಗಿರುವ 46,046 ರೈತರಿಂದ ಮಾತ್ರ ಖರೀದಿಸಲು ಅವಕಾಶವಿದ್ದು, ಇನ್ನುಳಿದ ತೆಂಗು ಬೆಳೆಗಾರರಿಗೆ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಹೆಚ್ಚಿನ ರೈತರು ಪ್ರಯೋಜನೆ ಪಡೆಯಲು ಅನುಕೂಲವಾಗುವಂತೆ, ದಿನಾಂಕ:09.02.2024 ರಂದು ರಾಜ್ಯ ಸರ್ಕಾರದ ವತಿಯಿಂದ ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಉಂಡೆ ಕೊಬ್ಬರಿಯ ಗರಿಷ್ಠ ಖರೀದಿ ಪ್ರಮಾಣದ ಮಿತಿಯನ್ನು ರಾಜ್ಯದ ಉತ್ಪಾದನೆಯ ಶೇ.25 ರಿಂದ ಶೇ.50ಕ್ಕೆ (1.25 ಲಕ್ಷ ಮೆಟ್ರಿಕ್ ಟನ್) ಹೆಚ್ಚಿಸುವಂತೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದಿಂದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಎಲ್ಲಾ ಪ್ರಕ್ರಿಯೆಯನ್ನು ನಿಯಮಾನುಸಾರ ಕೇಂದ್ರ ಸರ್ಕಾರದ ನಿರ್ದೇಶನಗಳನ್ವಯ ಕಾಲಮಿತಿಯಲ್ಲಿ ಕ್ರಮ ವಹಿಸಲಾಗುವುದು.

**ಸಂಖ್ಯೆ: ಸಿಒ 59 ಎಂಆರ್ಇ 2024**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

# Annexure 1

| 2023 | | | | |
|---|---|---|---|---|
| Sl No | District | No of Farmers registered | No of Farmers supplied copra | Procured Qty in Qtls |
| 1 | CHICKMAGALUR | 1,447 | 1,383 | 22,483 |
| 2 | CHITRADURGA | 1,273 | 1,245 | 21,284 |
| 3 | DAKSHINA KANNADA | 22 | 14 | 60 |
| 4 | HASSAN | 13,870 | 13,000 | 1,75,119 |
| 5 | MANDYA | 3,572 | 3,439 | 41,870 |
| 6 | TUMKUR | 17,683 | 16,155 | 2,41,027 |
| 7 | RAMANAGAR | 00 | 00 | 00 |
| 8 | CHAMARAJANAGAR | 00 | 00 | 00 |
| | Total | **37,867** | **35,236** | **5,01,845** |

ANNEXURE-2

# ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ

ಪ್ರ(1) 6235 23-24 20.01.2024

ವಿಷಯ:- ದಿನಾಂಕ:12.01.2024 ರಂದು 2024ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಉಂಡೆ ಕೊಬ್ಬರಿ ಖರೀದಿಗೆ ಸಂಬಂಧ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಕುರಿತು ಜರುಗಿದ ಸಭೆಯ ನಡವಳಿಯನ್ನು ಕಳುಹಿಸಿಕೊಡುವ ಕುರಿತು.

//*//

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:12.01.2024 ರಂದು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರ ಅಧ್ಯಕ್ಷತೆಯಲ್ಲಿ ಭೌತಿಕವಾಗಿ/ವಿಡಿಯೋ ಕಾನ್ಫರೆನ್ಸ್ ಮೂಲಕ 2024ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಉಂಡೆ ಕೊಬ್ಬರಿ ಖರೀದಿಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಕುರಿತು ಜರುಗಿದ ಸಭೆಯ ನಡವಳಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಪ್ರಧಾನ ವ್ಯವಸ್ಥಾಪಕರು.

ಗೆ:

1. ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಇವರ ಆಪ್ತ ಶಾಖೆಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಬೆಂಗಳೂರು.
3. ಶಾಖಾ ವ್ಯವಸ್ಥಾಪಕರು, ನಾಫೆಡ್, ಅರಮನೆ ರಸ್ತೆ, ಬೆಂಗಳೂರು.
4. ಜಂಟಿ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
5. ಸಹಾಯಕ/ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿ, ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ, ಚಾಮರಾಜನಗರ ಹಾಗೂ ರಾಮನಗರ ಜಿಲ್ಲೆ.
6. ಉಪ ಪ್ರಧಾನ ವ್ಯವಸ್ಥಾಪಕರು (ಪ್ರೊಕ್ಯೂರ್‌ಮೆಂಟ್), ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು.
7. ಕಛೇರಿ ಪತ್ರ.

ದಿನಾಂಕ:12.01.2024 ರಂದು 11.00 ಗಂಟೆಗೆ ಭೌತಿಕವಾಗಿ/ವಿಡಿಯೋ ಕಾನ್ಫರೆನ್ಸ್ ಮೂಲಕ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಇವರ ಅಧ್ಯಕ್ಷತೆಯಲ್ಲಿ 2024ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಉಂಡೆ ಕೊಬ್ಬರಿ ಖರೀದಿಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಕುರಿತು ಜರುಗಿದ ಸಭೆಯ ನಡವಳಿಗಳು:

***

ಪ್ರಾರಂಭದಲ್ಲಿ ಸಭೆಯಲ್ಲಿ ಹಾಜರಿದ್ದ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು, ಮಾರ್ಕ್‌ಫೆಡ್, ಶಾಖಾ ವ್ಯವಸ್ಥಾಪಕರು, ನಾಫೆಡ್, ರೈತ ಪ್ರತಿನಿಧಿಗಳು ಉಂಡೆ ಕೊಬ್ಬರಿ ಬೆಳೆಯುವ ಜಿಲ್ಲಾ ವ್ಯಾಪ್ತಿಯ ಉಪ/ಸಹಾಯಕ ನಿರ್ದೇಶಕರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳು ಹಾಗೂ ಅಧಿಕಾರಿಗಳನ್ನು ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಇವರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

2023-24ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಉಂಡೆ ಕೊಬ್ಬರಿಯನ್ನು ಸುಗಮವಾಗಿ ಖರೀದಿಸಲು, ಖರೀದಿ ಪ್ರಕ್ರಿಯೆಗೆ ಅವಶ್ಯವಿರುವ ಖರೀದಿ ಕೇಂದ್ರಗಳು ಉಗ್ರಾಣ ವ್ಯವಸ್ಥೆ, ಸಿ.ಸಿ.ಟಿ.ವಿ ವ್ಯವಸ್ಥೆ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಈ ಕೆಳಗಿನಂತೆ ತೀರ್ಮಾನ ಕೈಗೊಳ್ಳಲಾಯಿತು.

- ಖರೀದಿ ಕೇಂದ್ರಗಳ ಸ್ವಚ್ಚತೆ, ಶೌಚಾಲಯ, ಕುಡಿಯುವ ನೀರು, ಕ್ಯಾಂಟೀನ್ ವ್ಯವಸ್ಥೆ, ವಿದ್ಯುತ್ ಸಂಪರ್ಕ, ತೂಕದ ಯಂತ್ರ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಹಾಗೂ ಸಿ.ಸಿ.ಟಿ.ವಿ ವ್ಯವಸ್ಥೆಯನ್ನು ಮಾಡಿಕೊಳ್ಳಲು ಖರೀದಿ ಸಂಸ್ಥೆಯಾದ ಮಾರ್ಕ್‌ಫೆಡ್ ಸಂಸ್ಥೆಯ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳು ಸಮಾಲೋಚಿಸಿ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳುವಂತೆ ಸೂಚಿಸಲಾಯಿತು.

  ಕ್ರಮ: ಎ.ಪಿ.ಎಂ.ಸಿ & ಮಾರ್ಕ್‌ಫೆಡ್.

- 2023-24ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಉಂಡೆ ಕೊಬ್ಬರಿ ಖರೀದಿಯ ಪ್ರಕ್ರಿಯೆಗೆ ಅನುಕೂಲವಾಗುವಂತೆ ಸಮಿತಿಗಳಲ್ಲಿ ಲಭ್ಯವಿರುವ ವೇಬ್ರಿಜ್‌ಗಳನ್ನು ಉಪಯೋಗಿಸಿಕೊಳ್ಳಲು ಹಾಗೂ ವೇಬ್ರಿಜ್‌ಗಳನ್ನು ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ಸತ್ಯಾಪನೆ ಮತ್ತು ಮುದ್ರೆ ಹಾಗೂ ತಪಾಸಣೆ ಕೈಗೊಳ್ಳಲು ತುರ್ತಾಗಿ ಕ್ರಮ ವಹಿಸಲು ಸೂಚಿಸಲಾಯಿತು.

  ಕ್ರಮ: ಸಂಬಂಧಪಟ್ಟ ಸಮಿತಿಗಳ ಕಾರ್ಯದರ್ಶಿ.

ಪುಟ..2ಕ್ಕೆ

➢ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲಭ್ಯವಿರುವ ಗೋದಾಮುಗಳನ್ನು ಕರ್ನಾಟಕ ರಾಜ್ಯ ಉಗ್ರಾಣ ನಿಗಮದವರೊಂದಿಗೆ ಚರ್ಚಿಸಿ ಕನಿಷ್ಠ ಬೆಂಬಲ ಬೆಲೆ ಯೋಜನೆಯ ಅನುಷ್ಠಾನಕ್ಕೆ ಉಪಯೋಗಿಸಲು ಸೂಚಿಸಲಾಯಿತು.

ಕ್ರಮ: ಸಂಬಂಧಪಟ್ಟ ಸಮಿತಿಗಳ ಕಾರ್ಯದರ್ಶಿ.

➢ ಖರೀದಿ ಕೇಂದ್ರಗಳಲ್ಲಿ ರೈತರ ಹೆಸರಿನಲ್ಲಿ ವರ್ತಕರು ತರುವ ಉತ್ಪನ್ನಗಳನ್ನು ಖರೀದಿಸದಂತೆ ಹಾಗೂ ಯಾವುದೇ ರೀತಿಯ ದುರುಪಯೋಗವಾಗದಂತೆ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸುವಂತೆ ಹಾಗೂ ಮಧ್ಯವರ್ತಿಗಳ ದುರುಪಯೋಗ ಕಂಡುಬಂದರೆ ಸಂಬಂಧಪಟ್ಟ ಜಿಲ್ಲಾ ಸಹಾಯಕ/ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಕಾರ್ಯದರ್ಶಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಖರೀದಿ ಅಧಿಕಾರಿಗಳು ಕಾನೂನು ರೀತ್ಯಾ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ಕ್ರಮ: ಸಂಬಂಧಪಟ್ಟ ಸಹಾಯಕ/ಉಪ ನಿರ್ದೇಶಕರು, ಸಮಿತಿಗಳ ಕಾರ್ಯದರ್ಶಿ ಮತ್ತು ಮಾರ್ಕ್‌ಫೆಡ್.

➢ ಸಂಬಂಧಪಟ್ಟ ಎ.ಪಿ.ಎಂ.ಸಿ ಗಳಲ್ಲಿ ಈಗಾಗಲೇ ಆವಕವಾಗಿರುವ ಕೊಬ್ಬರಿಯನ್ನು ಮಾರಾಟ ಮಾಡದೆ ಸಂಗ್ರಹಿಸಿಟ್ಟುಕೊಂಡಿರುವಂತ ಎಲ್ಲಾ ವರ್ತಕರ ದಾಸ್ತಾನು ಪರಿಶೀಲಿಸಿ ದೃಢೀಕರಿಸಿಕೊಂಡು ಕೇಂದ್ರ ಕಛೇರಿಗೆ ವರದಿ ಸಲ್ಲಿಸುವುದು ಹಾಗೂ ಖರೀದಿ ಕೇಂದ್ರದಲ್ಲಿ ಮರು ಮಾರಾಟ ಆಗದಂತೆ ಕ್ರಮವಹಿಸಲು ಸಮಿತಿಯ ಕಾರ್ಯದರ್ಶಿಗಳು ಕ್ರಮಕೈಗೊಳ್ಳಲು ಸೂಚಿಸಲಾಯಿತು.

ಕ್ರಮ: ಸಂಬಂಧಪಟ್ಟ ಸಮಿತಿಗಳ ಕಾರ್ಯದರ್ಶಿ.

➢ ಖರೀದಿ ಕೇಂದ್ರಗಳಿಗೆ ಮಾರಾಟಕ್ಕೆ ತರುವ ರೈತ ನೋಂದಣಿ ಕಾರ್ಯವನ್ನು Adhaar Based Biometric Authentication ಮುಖಾಂತರ ಮಾಡಲು ಸರ್ಕಾರದ ಅನುಮತಿಯೊಂದಿಗೆ ಕ್ರಮವಹಿಸಲು ಖರೀದಿ ಸಂಸ್ಥೆಗೆ ಸೂಚಿಸಲಾಯಿತು.

ಕ್ರಮ: ಮಾರ್ಕ್‌ಫೆಡ್.

➢ ನೊಂದಣಿ ಆದ ಕೂಡಲೇ ರೈತರಿಗೆ ಉಂಡೆ ಕೊಬ್ಬರಿ ಖರೀದಿಸುವ ದಿನಾಂಕವನ್ನು ನೋಂದಣಿಯಾದ ದಿನಾಂಕದ ಆಧಾರದ ಮೇಲೆ ಕಡ್ಡಾಯವಾಗಿ ಖರೀದಿಸುವ ನಿಗಧಿತ ದಿನಾಂಕವನ್ನು ನೀಡಲು ಸೂಚಿಸಿ, ಇದಕ್ಕಾಗಿ ಟೋಕನ್ ಪದ್ಧತಿಯನ್ನು ಅನುಸರಿಸಲು ಸೂಚಿಸಲಾಯಿತು ಹಾಗೂ ತಾಂತ್ರಿಕ ತೊಂದರೆ ಮತ್ತು ಖರೀದಿ ಕೇಂದ್ರಗಳಲ್ಲಿ ಅಡಚಣೆ ಉಂಟಾದಲ್ಲಿ ಮುಂಚಿತವಾಗಿ ಮಾಹಿತಿಯನ್ನು ರೈತರಿಗೆ ನೀಡಲು ಸೂಚಿಸಲಾಯಿತು.

ಕ್ರಮ: ಮಾರ್ಕ್‌ಫೆಡ್.

ಪುಟ..3ಕ್ಕೆ

- ಮಾರ್ಗಸೂಚಿಗಳನ್ವಯ ಕೊಬ್ಬರಿ ಖರೀದಿ ವೇಳೆ ರೈತರಿಂದ ಖಾಲಿ ಚೀಲದ ತೂಕದ ಪ್ರಮಾಣಕ್ಕನುಗುಣವಾಗಿ (500 ಕಿ.ಗ್ರಾಂ ರಿಂದ 580 ಕಿ.ಗ್ರಾಂ) ಮಾತ್ರ ಕೊಬ್ಬರಿಯನ್ನು ಪಡೆಯಲು ಸೂಚಿಸಲಾಯಿತು.

  ಕ್ರಮ: ಮಾರ್ಕ್‌ಫೆಡ್.

- ಖರೀದಿ ಪ್ರಕ್ರಿಯೆಯಲ್ಲಿ ಕೊಬ್ಬರಿ ತೂಕ ಮತ್ತು ಇತರೆ ಕೆಲಸಗಳಿಗೆ ತೆಗೆದುಕೊಳ್ಳುವ ಹಮಾಲರ ವೆಚ್ಚವನ್ನು ಸಾಗಾಣಿಕೆ ಮತ್ತು ಹಸ್ತಾಂತರ ಟೆಂಡರ್‌ನಲ್ಲಿ ಅನುಮೋದಿಸಿರುವಂತೆ ಪಾವತಿಸಲು ಹಾಗೂ ಕಾಲಕಾಲಕ್ಕೆ ನಿಗದಿತ ಸಮಯಕ್ಕೆ ಸಾರಿಗೆ ವ್ಯವಸ್ಥೆಯನ್ನು ಒದಗಿಸಲು ಹೆಚ್.ಎಂ.ಟಿ. ಗುತ್ತಿದಾರರಿಗೆ ಸೂಚಿಸಿ ಕ್ರಮವಹಿಸುವಂತೆ ಖರೀದಿ ಸಂಸ್ಥೆಗೆ ಸೂಚಿಸಲಾಯಿತು.

  ಕ್ರಮ: ಮಾರ್ಕ್‌ಫೆಡ್.

- ಕೊಬ್ಬರಿ ಖರೀದಿ ಪ್ರಕ್ರಿಯೆ ಸುಗಮವಾಗಿ ಜಾರಿಗೊಳಿಸುವ ಸಂಬಂಧ ಕೇಂದ್ರ ಸರ್ಕಾರದ ನಾಫೆಡ್ ಸಂಸ್ಥೆ, ರಾಜ್ಯ ಸರ್ಕಾರದ ಖರೀದಿ ಸಂಸ್ಥೆಯಾದ ಮಾರ್ಕ್‌ಫೆಡ್ ಸಂಸ್ಥೆ ಹಾಗೂ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಅಧಿಕಾರಿಗಳನ್ನೊಳಗೊಂಡಂತೆ ರಾಜ್ಯ ಮಟ್ಟದ ತಂಡವನ್ನು ರಚಿಸಿ, ಕಾಲಕಾಲಕ್ಕೆ ಖರೀದಿ ಪ್ರಕ್ರಿಯೆಯ ಸಂಬಂಧ ವರದಿಯನ್ನು ಸರ್ಕಾರಕ್ಕೆ ಮತ್ತು ಮಂಡಳಿಗೆ ಸಲ್ಲಿಸಲು ಸೂಚಿಸಲಾಯಿತು.

  **ಕ್ರಮ: ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ.**

- ಕೇಂದ್ರ ಸರ್ಕಾರದ ನಾಫೆಡ್ ಸಂಸ್ಥೆ ಹಾಗೂ ರಾಜ್ಯ ಸರ್ಕಾರದ ಖರೀದಿ ಸಂಸ್ಥೆಯಾದ ಮಾರ್ಕ್‌ಫೆಡ್ ಸಂಸ್ಥೆಯ ವತಿಯಿಂದ ಖರೀದಿ ಪ್ರಕ್ರಿಯೆಯಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ತುರ್ತಾಗಿ ಕ್ರಮವಹಿಸಲು ಅನುಕೂಲವಾಗುವಂತೆ ಉಚಿತ ದೂರವಾಣಿ (Toll Free) ಹಾಗೂ ಸಲಹಾ ಪೆಟ್ಟಿಗೆಯನ್ನು (Suggestion Box) ಖರೀದಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ಅಳವಡಿಸಲು ಸೂಚಿಸಲಾಯಿತು.

  ಕ್ರಮ: ಮಾರ್ಕ್‌ಫೆಡ್

- ಖರೀದಿ ಪ್ರಕ್ರಿಯೆ ಪ್ರಾರಂಭಗೊಳ್ಳುವ ಪೂರ್ವದಲ್ಲಿ ಖರೀದಿ ಅಧಿಕಾರಿಗಳು ಸಂಬಂಧಪಟ್ಟ ಸಮಿತಿಗಳ ಕಾರ್ಯದರ್ಶಿಗಳು ಹಾಗೂ ಇತರೇ ಅಧಿಕಾರಿಗಳನ್ನೊಳಗೊಂಡಂತೆ ಸಮಾರೋಚಿಸಿ ಪೂರ್ವ ಸಿದ್ಧತೆ ಮಾಡಿಕೊಳ್ಳಲು ಹಾಗೂ ಖರೀದಿ ಪ್ರಕ್ರಿಯೆಗೆ ಸಂಬಂಧಿಸಿದ ಬಿತ್ತಿ ಪತ್ರಗಳನ್ನು ಅಳವಡಿಸಿ ರೈತರಿಗೆ ವ್ಯಾಪಾಕ ಪ್ರಚಾರ ಕೈಗೊಳ್ಳಲು ಸೂಚಿಸಲಾಯಿತು.

  ಕ್ರಮ: ಮಾರ್ಕ್‌ಫೆಡ್

ಪುಟ..4ಕ್ಕೆ

- ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಗಳನ್ವಯ ಎಫ್.ಎ.ಕ್ಯೂ ಗುಣಮಟ್ಟದ ಕೊಬ್ಬರಿ ಮಾರಾಟಕ್ಕೆ ತರಲು ಅನುಕೂಲವಾಗುವಂತೆ ಎಫ್.ಎ.ಕ್ಯೂ ಗುಣಧರ್ಮಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲು ಖರೀದಿ ಸಂಸ್ಥೆಗೆ ಸೂಚಿಸಲಾಯಿತು.

**ಕ್ರಮ: ಮಾರ್ಕ್‌ಫೆಡ್**

2023-24ನೇ ಸಾಲಿನಲ್ಲಿ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಉಂಡೆ ಕೊಬ್ಬರಿ ಖರೀದಿ ಪ್ರಕ್ರಿಯೆ ಸುಗಮವಾಗಿ ಜಾರಿಗೊಳಿಸಲು ಅನುಕೂಲವಾಗುವಂತೆ ಖರೀದಿ ಕೇಂದ್ರಕ್ಕೆ ಬರುವ ರೈತರೊಂದಿಗೆ ಖರೀದಿ ಕೇಂದ್ರದ ಅಧಿಕಾರಿಗಳು ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧಿಕಾರಿ/ಸಿಬ್ಬಂದಿಗಳು ಸೌಹಾರ್ದತೆಯಾಗಿ ಸ್ಪಂದಿಸಲು ಹಾಗೂ ಬೆಂಬಲ ಬೆಲೆ ಯೋಜನೆಯ ಮಾಹಿತಿಯನ್ನು ನೀಡಿ ವ್ಯಾಪಕ ಪ್ರಚಾರ ಕೈಗೊಳ್ಳಲು ಸೂಚಿಸಲಾಯಿತು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

12/1/24.

ನಿರ್ದೇಶಕರು,
ಕೃಷಿ ಮಾರಾಟ ಇಲಾಖೆ ಹಾಗೂ
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಇವರ ಆಪ್ತ ಶಾಖೆಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ಬೆಂಗಳೂರು.
3. ಶಾಖಾ ವ್ಯವಸ್ಥಾಪಕರು, ನಾಫೆಡ್, ಅರಮನೆ ರಸ್ತೆ, ಬೆಂಗಳೂರು.
4. ಜಂಟಿ ನಿರ್ದೇಶಕರು, ತೋಟಗಾರಿಕಾ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
5. ಸಹಾಯಕ/ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿ, ತುಮಕೂರು, ಹಾಸನ, ಚಿಕ್ಕಮಗಳೂರು, ಚಿತ್ರದುರ್ಗ, ಮಂಡ್ಯ, ಮೈಸೂರು, ದಕ್ಷಿಣ ಕನ್ನಡ, ಚಾಮರಾಜನಗರ ಹಾಗೂ ರಾಮನಗರ ಜಿಲ್ಲೆ.
6. ಉಪ ಪ್ರಧಾನ ವ್ಯವಸ್ಥಾಪಕರು (ಪ್ರೊಕ್ಯೂರ್‌ಮೆಂಟ್), ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಬೆಂಗಳೂರು.
7. ಕಛೇರಿ ಪತ್ರ

ANNEXURE-3

# District wise Farmer Registration & Quantity Registered for Copra Procurement 2024

| Sl o | District | Taluk | No of Centers | Center | No of Farmers | Registered Qty in Qtls |
|---|---|---|---|---|---|---|
| 1 | Chamrajnagar | ChamarajaNagara | 2 | CHAMARAJANAGARA-US10669 | 7 | 119 |
| | | Gundlupet | | GUNDLUPETE-US10663 | 1 | 10 |
| 2 | Chikmagalur | Chikmagalur | 4 | APMC CHIKAMAGALORE-US10586 | 534 | 7405.5 |
| | | | | APMC PAMCHANAHALLI-US10683 | 359 | 5000 |
| | | Kadur | | APMC KADUR-US6962 | 2200 | 32100 |
| | | Tarikere | | APMC TARIKERE-US10581 | 1130 | 16350 |
| 3 | Chitradurga | Chitradurga | 4 | APMC CHITRADURGA-US10597 | 822 | 12319 |
| | | Hiiriyur | | APMC HIRIYUR-US9296 | 256 | 4016 |
| | | Hosdurga | | APMC HOSADURGA ONE-US6952 | 1166 | 17068 |
| | | | | APMC HOSADURGA TWO-US10598 | 1227 | 17584 |
| 4 | Hassan | Arsikere | 13 | ARASIKERE-US6983 | 1847 | 23871.5 |
| | | | | GANDASI-US9826 | 1352 | 17170 |
| | | | | J C PURA-US10583 | 694 | 9208 |
| | | | | JAVAGAL-US10582 | 1308 | 18071 |
| | | Chanrayapatna | | BAGURU-US10599 | 1316 | 17911 |
| | | | | CHANNARYAPATTANA-US6986 | 2102 | 27998 |
| | | | | HIRISAVE-US10591 | 695 | 9980 |
| | | | | NUGGEHALLI-US9825 | 1064 | 15046.5 |
| | | | | SHRAVANABELAGOLA-US9823 | 2001 | 26734.5 |
| | | | | Udayapura-US10689 | 46 | 611 |
| | | Hassan | | BANAVARA-US10590 | 1215 | 16149.5 |
| | | | | DUDDA-US10589 | 1001 | 11577.5 |
| | | Holenarasipura | | HOLENARASIPURA-US10592 | 1087 | 14088 |
| 5 | Mandya | K.R.Pet | 7 | K R Pete-US6982 | 1485 | 17748.5 |
| | | | | KIKKERI-US10584 | 1925 | 24967 |
| | | Maddur | | MADDUR-US10618 | 596 | 7232.5 |
| | | Nagmangala | | NAGAMANGALA APMC-US10682 | 180 | 2296.5 |
| | | | | NAGMANGALA KADABAHALLI O | 866 | 11741.5 |
| | | | | NAGMANGALA KADABAHALLI T | 679 | 8879 |
| | | Pandavapura | | PANDAVAPURA-US7025 | 1148 | 14789.5 |
| 6 | Mysore | Hunsur | | HUNSURU-US10588 | 150 | 1883 |
| | | Mysore | 2 | BANDIPALYA MYSURU-US10587 | 249 | 3129.5 |
| 7 | Ramnagar | Channapatna | | APMC Channapatna-US10633 | 118 | 1459 |
| | | Kanakpura | | APMC kanakpura-US10616 | 2 | 11 |
| | | Ramanagar | 3 | APMC Ramanagara-US10615 | 9 | 123 |
| 8 | Tumkur | Chiknayakanahalli | 23 | APMC CHIKKANAYAKANAHALLI | 728 | 9889 |
| | | | | APMC CHIKKANAYAKANAHALLI- | 762 | 10987 |
| | | | | APMC HULIYAR ONE-US10029 | 680 | 9306.5 |
| | | | | APMC HULIYAR-US6960 | 515 | 7087.5 |
| | | Gubbi | | APMC CHELUR-US6957 | 649 | 8988.5 |
| | | | | APMC GUBBI ONE-US6956 | 920 | 12818 |
| | | | | APMC GUBBI TWO-US10602 | 1069 | 14388 |
| | | Kunigal | | APMC KUNIGAL-US6999 | 421 | 5473 |
| | | Sira | | APMC SIRA-US6955 | 159 | 2084 |
| | | Tiptur | | APMC K B CROSS-US10632 | 420 | 6133 |
| | | | | APMC KARADALU ONE-US10595 | 444 | 5949 |
| | | | | APMC KARADALU TWO-US10596 | 111 | 1654.5 |
| | | | | APMC KONEHALLI ONE-US10593 | 393 | 5434 |
| | | | | APMC KONEHALLI TWO-US10594 | 660 | 9152 |
| | | | | APMC TIPTUR ONE-US9819 | 1843 | 25812 |
| | | | | APMC TIPTUR TWO-US9820 | 121 | 1768.5 |
| | | Tumkur | | APMC TUMKUR-US6954 | 292 | 3964.5 |
| | | Turuvekere | | TURUVEKERE FIVE MAYASANDR | 464 | 6558.5 |
| | | | | TURUVEKERE FOUR MUNIYURU-I | 835 | 12171.5 |
| | | | | TURUVEKERE ONE APMC YARD A | 1179 | 15883 |
| | | | | TURUVEKERE SIX MAYASANDRA | 581 | 8048 |
| | | | | TURUVEKERE THREE DABBEGHA | 1124 | 15921 |
| | | | | TURUVEKERE TWO APMC YARD I | 829 | 11188 |
| **Grand Total** | | | **58** | | **46036** | **625307** |

ಅನುಬಂಧ-4

: ಕೊಬ್ಬರಿ ಖರೀದಿ ಕೇಂದ್ರಗಳಲ್ಲಿ ಅನಧೀಕೃತ ಉಪಕರಣಗಳನ್ನು ಉಪಯೋಗಿಸಿ ನೋಂದಣಿ ಮಾಡಿ ಅಮಾನತ್ತಾಗಿರುವ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಸಿಬ್ಬಂದಿಗಳ ವಿವರಗಳು :

## ಹಾಸನ ಜಿಲ್ಲೆ:

1. ಶ್ರೀ ಜಯಶಂಕರ್ ಸಿ.ಎಸ್. ಹಿರಿಯ ಸಹಾಯಕರು, ಅರಸೀಕೆರೆ ಖರೀದಿ ಕೇಂದ್ರ
2. ಶ್ರೀ ದಿವಾಕರ್ ಕೆ., ಕಿರಿಯ ಸಹಾಯಕರು, ಗಂಡಸಿ ಖರೀದಿ ಕೇಂದ್ರ
3. ಶ್ರೀ ಕೆ.ಎಲ್. ಚೇತನ್, ಹಿರಿಯ ಸಹಾಯಕರು, ಚನ್ನರಾಯಪಟ್ಟಣ ಶಾಖೆ,
4. ಶ್ರೀ ವೆಂಕಟರೆಡ್ಡಿ ಪಾಟೀಲ್, ಹಿರಿಯ ಸಹಾಯಕರು, ಜಾವಗಲ್ ಖರೀದಿ ಕೇಂದ್ರ
5. ಶ್ರೀ ಹುಸೇನ್ ಸಾಬ್ ನದಾಫ್, ಕಿರಿಯ ಸಹಾಯಕರು, ಶ್ರವಣಬೆಳಗೊಳ ಖರೀದಿ ಕೇಂದ್ರ

## ಮಂಡ್ಯ ಜಿಲ್ಲೆ:

1. ಶ್ರೀ ಮಂಜುನಾಥ್ ರಾಜೆಅರಸ್, ಹಿರಿಯ ಸಹಾಯಕರು, ಕಿಕ್ಕೇರಿ ಖರೀದಿ ಕೇಂದ್ರ
2. ಶ್ರೀ ಲಿಂಗಣ್ಣ ಜಮಖಂಡಿ, ಹಿರಿಯ ಸಹಾಯಕರು, ಪಾಂಡವಪುರ ಖರೀದಿ ಕೇಂದ್ರ
3. ಶ್ರೀ ಮುನೇಶ್ ಗೌಡ ಜಿ. ಕಿರಿಯ ಸಹಾಯಕರು, ಕೆ.ಆರ್.ಪೇಟೆ ಖರೀದಿ ಕೇಂದ್ರ

## ಚಿಕ್ಕಮಂಗಳೂರು ಜಿಲ್ಲೆ:

1. ಶ್ರೀ ಉದಯ್‌ಕುಮಾರ್ ಎ.ಎಂ. ,ಹಿರಿಯ ಸಹಾಯಕರು, ಕಡೂರು ಖರೀದಿ ಕೇಂದ್ರ

**ಒಟ್ಟು 09 ಖರೀದಿ ಅಧಿಕಾರಿಗಳು**